ಆವಿಷ್ಕಾರ ಮಾನವನಿಗೆ ದೇವನಿಂದ ತಪಸ್ಸು ಮಾಡದೆ ಸಿಕ್ಕ ವರವೆನ್ನಬಹುದು. ವಾಟ್ಸಾಪ್ ಗ್ರೂಪ್ ಶುರುವಾಗಿ 10 ವರ್ಷಗಳಾಯಿತಂತೆ, ಆಫೀಸಿಗೆ ಹೋಗುವವರಿರಲಿ, ಹೋಂ ಮೇಕರ್ ಗೃಹಿಣಿಯರಿರಲಿ, ಮೊಬೈಲ್ ಉಪಯೋಗಿಸುವ ಅಜ್ಜ ಅಜ್ಜಿಯರಿರಲಿ, ಮಕ್ಕಳಂತೂ ಬಿಡಿ ಕೊರೊನಾ ಬಂದ ಎರಡು ವರ್ಷ ಟೀಚರ್ ಮಕ್ಕಳಿಗೆ ಹೋಂವರ್ಕ್ ಕೊಡುತ್ತಿದ್ದದ್ದೇ ವಾಟ್ಸಾಪ್‌ನಲ್ಲಿ.

ಹೆಚ್ಚಿನವರು ಒಂದಾದರೂ ವಾಟ್ಸಾಪ್ ಗ್ರೂಪ್‌ನ ಪಾಲುದಾರರೇ. 25–30ಕ್ಕೂ ಹೆಚ್ಚು ಗ್ರೂಪಿನಲ್ಲಿ ಸಕ್ರಿಯವಾಗಿರುವವರೂ ಇದ್ದಾರೆ. ಅತಿ ಕಡಿಮೆ ಸಮಯದಲ್ಲಿ ಹೆಚ್ಚು ಜನರನ್ನು ತಲುಪುವ ಮಾಧ್ಯಮವೆಂದರೆ ಟೀವಿ, ರೇಡಿಯೊದ ನಂತರದ ಸ್ಥಾನ ವಾಟ್ಸಾಪ್ ಗ್ರೂಪ್ ಇರಬಹುದು. ಎಮ್ಮೆ ಬಾವಿಗೆ ಬಿದ್ದದ್ದು, ಯಾರದ್ದೋ ಅಂಗಳದಲ್ಲಿನ ನವಿಲಿನ ಕುಣಿತ, ಮಗು ಕಳೆದುಹೋದದ್ದು, ರಕ್ತ–ಕಿಡ್ನಿ ಬೇಕಾಗಿದ್ದರೂ ಮೆಸೇಜು/ಫೋಟೊ/ವಿಡಿಯೊ ಮಾಡಿ ಒಂದೆರಡು ಗ್ರೂಪ್‌ನಲ್ಲಿ ಹಾಕಿದರೂ ಸಾಕು, ಅದು ಮುಂದಕ್ಕೆ, ಮುಂದಕ್ಕೆ ತಳ್ಳಲ್ಪಟ್ಟು ಲಕ್ಷಾಂತರ ಜನರನ್ನು ಒಂದೆರಡು ದಿನಗಳಲ್ಲಿ ತಲುಪದಿದ್ದರೆ ಹೇಳಿ.



ಸ್ಮಾರ್ಟ್‌ಫೋನ್, ಇಂಟರ್ನೆಟ್ ಇದ್ದು ವಾಟ್ಸಾಪ್ ಅಳವಡಿಸಿಕೊಂಡಿದ್ದರೆ ಸಾಕು – ಲಿಂಗಭೇದವಿಲ್ಲ, ವಯಸ್ಸಿನ ಅಂತರವಿಲ್ಲ, ವಾಟ್ಸಾಪ್ ಗ್ರೂಪಿನಲ್ಲಿ ಒಂದಾಗಲು. ನಮ್ಮ ಅತ್ತೆಗೆ 85 ವರ್ಷ, ಒಂದು ಸಾಧಾರಣ ಫೋನ್ ಇತ್ತು, ಪಕ್ಕದ ಬೀದಿಯ ವಯಸ್ಸಾದವರೊಡನೆ ಸಂಜೆ ವಾಕಿಂಗ್ ಹೋಗುತ್ತಾರೆ. ಒಂದು ಸಂಜೆ ವಾಕಿಂಗ್ ಮುಗಿಸಿ ಬಂದವರೆಂದರು – 'ನಂಗೆ ಹೊಸ ಫೋನ್ ತೆಗ್ಸಿ ಕೊಡು, ನಮ್ಮದೆಲ್ಲಾ ವಾಟ್ಸಾಪ್ ಗ್ರೂಪ್ ಇದೆಯಂತೆ'. ಹೊಸ ಫೋನ್ ಬಂದ ದಿನವೇ ಗ್ರೂಪ್‌ನಲ್ಲಿ ಸೇರಿಕೊಂಡರು, ಮೆಸೇಜ್ ಮಾಡುವುದನ್ನು ಕಲಿತರು. ಮಕ್ಕಳು, ಮೊಮ್ಮಕ್ಕಳಿಗೆ ಬುದ್ಧಿ ಹೇಳಬೇಕೇ? ಬೇಡವೇ? ಎನ್ನುವ ಬಗ್ಗೆ ಮೊನ್ನೆ ಅವರ ಗ್ರೂಪ್‌ನಲ್ಲಿ ಚರ್ಚೆ ನಡೆಯುತ್ತಿತ್ತು.

ಓದಲು ಬರೆಯಲು ಬಾರದವರೂ ಸ್ಮಾರ್ಟ್ ಫೋನ್ ಉಪಯೋಗಿಸುವುದನ್ನು ಕಲಿತು ಸ್ಮಾರ್ಟ್ ಆಗಿ ವಾಟ್ಸಾಪ್ ಗ್ರೂಪಿನಲ್ಲಿ ಭಾಗಿಯಾಗಿರುವುದು ಹೆಮ್ಮೆಯ ವಿಷಯ. ಇದು ದೇಶ, ಬದುಕು ಮುಂದುವರಿಯುತ್ತಿರುವ ಸಂಕೇತ ಎನ್ನುತ್ತಾರೆ ನನ್ನ ಗಂಡ. ನಮ್ಮ ಲೇಔಟಿನ ಮನೆಕೆಲಸಕ್ಕೆ ಬರುವ ಹೆಣ್ಣುಮಕ್ಕಳು ಒಂದು ಗ್ರೂಪ್ ಮಾಡಿಕೊಂಡಿದ್ದಾರಂತೆ. ಯಾರ ಮನೆಯಲ್ಲಿ ಹಳಸಿದ್ದು ಕೊಟ್ಟಿದ್ದಾರೆ, ಯಾರ ಮನೆಯಲ್ಲಿ ಗಂಡ ಹೆಂಡತಿ ಜಗಳ ಮಾಡಿಕೊಂಡಿದ್ದಾರೆ, ಯಾರು ಹಬ್ಬಕ್ಕೆ ಹೊಸ ಬಟ್ಟೆ ಕೊಡದೆ ಕಂಜೂಸಿ ಮಾಡಿದ್ದಾರೆ ಎನ್ನುವ ವಿಷಯವನ್ನು ವೈರಲ್ ಮಾಡುತ್ತಿದ್ದು ಮನೆಮನೆಯ ಗುಟ್ಟುಗಳು ಗುಟ್ಟುಗಳಾಗಿ ಉಳಿದಿಲ್ಲವಂತೆ.

ಗೆಳತಿ ಶೈಲಜಾ ಬೇಜಾರು ಪಟ್ಟುಕೊಂಡಿದ್ದಳು. 'ಏನ್ರಿ, ಏನಾಯಿತು?' ಎಂದೆ. 'ಮಗಳು ಡೆಲಿವರಿಗೆ ಬಂದಿದ್ದಾಳೆ, ಆದರೆ ಹೇಳಿದ್ದನ್ನ ಕೇಳ್ತಿಲ್ಲ. ಏಳೆಂಟು ತಿಂಗಳ ಬಸುರಿಯರದ್ದೇ ಗ್ರೂಪ್ ಇದ್ಯಂತೆ, ಎಲ್ಲ್ರೂ ಚರ್ಚೆ ಮಾಡಿಯೇ ಆಹಾರ ತೆಗೆದುಕೊಳ್ಳೋದಂತೆ, ವ್ಯಾಯಾಮ ಮಾಡೋದಂತೆ. 'ನಾನು 3 ಹೆತ್ತಿದ್ದೀನಿ, 1 ಅಬಾರ್ಷನ್ ಆಗಿದೆ, ಆಗ್ಲೇ 3 ಬಾಣಂತನ ಮಾಡಿದ್ದೀನಿ, ನಾನು ಹೇಳೋದನ್ನ ಬಿಟ್ಟು ವಾಟ್ಸ್‌ಅಪ್ ಗ್ರೂಪ್‌ನವರು ಹೇಳಿದಂತೆ ಕೇಳೋದಂದ್ರೇನು? ನಿನ್ನೆಯಂತೂ ನಂಗೇ ಬುದ್ಧಿ ಹೇಳಿದ್ಲು – ಅಜ್ಜಿಯಾಗುವವರ ನಡವಳಿಕೆ ಹೀಗೇ ಇರಬೇಕಂತ! ಅಲ್ಲಾ, ನಮ್ಮಂತವರು ಇದ್ದೇನು ಪ್ರಯೋಜನ?' ಎನ್ನುತ್ತಾ ಶೈಲಜಾ ಕಣ್ಣೊರೆಸಿಕೊಂಡರು. ಜನರು ಟೆಕ್ನಾಲಜಿಯ ಪ್ರಯೋಜನವನ್ನು ಪಡೆಯುತ್ತಿರುವುದನ್ನು ಕಂಡು ಸಂತೋಷವಾದರೂ ಗೆಳತಿಯ ದುಃಖ ನೋಡಿ ಬೇಜಾರಾಯಿತು.

ವಾಟ್ಸಾಪ್ ಗ್ರೂಪುಗಳಿಗೆ ಚಿತ್ರ, ವಿಚಿತ್ರ, ಗಾಬರಿ ಹುಟ್ಟಿಸುವ ಹೆಸರಿಡುವುದಿದೆ. ಕಳೆದ ವಾರ ಗಂಡನ ಮೊಬೈಲಿನಲ್ಲಿ 'ಬಿಕನಿ ಗ್ರೂಪ್' ಕಂಡಾಗ ಮೆಟ್ಟಿ ಬಿದ್ದೆ. 'ಏನ್ರಿ ಇದು?' ಅಂದ್ರೆ 'ನಿಂಗೆ ಅದೆಲ್ಲಾ ಏಕೆ?' ಎಂದು ಹೂಂಕರಿಸಿದವರು, 'ಬಿಕನಿ ಎಂದರೆ – ಬಿಹಾರ್, ಕರ್ನಾಟಕ ನಿಗಮ ಅಂತ. ಅದರ ಆಡಿಟಿಂಗ್ ಕೆಲಸ ನನ್ನ ಸಂಸ್ಥೆಗೆ ಸಿಕ್ಕಿದೆ, ಆ ಕೆಲಸದಲ್ಲಿ ತೊಡಗಿಕೊಂಡವರ ಗುಂಪಿಗೆ ಆ ಹೆಸರಿಟ್ಟೆ' ಎಂದರು. ಉತ್ತರ ಕೇಳಿ ಸ್ವಲ್ಪ ಸಮಾಧಾನವಾದರೂ ಯಾರಾದರೂ ನೋಡಿದರೆ ಏನೆಂದುಕೊಂಡಾರು ಎನಿಸಿತು. ಮಗಳ ಮೊಬೈಲ್‌ನಲ್ಲಿ 'ಕಿಸ್ ಗ್ರೂಪ್' ಇತ್ತು, ಇದಕ್ಕೂ ಏನಾದರೂ ಅರ್ಥವಿರಬಹುದು, ನಾನು ತಿಳಿದುಕೊಂಡಂತೆ ಅಲ್ಲ ಎನಿಸಿ ಕೇಳಲು ಹೋಗಿಲ್ಲ. ಇಂತಹದ್ದನ್ನೆಲ್ಲಾ ತಲೆಗೆ ಹಚ್ಚಿಕೊಳ್ಳಬಾರದು ಎನಿಸಿ ಕಡೆಗೆ ನಾನೇ 'ಡೋಂಟ್ ಕೇರ್' ಗ್ರೂಪನ್ನು ಶುರು ಮಾಡಿದೆ.

ಫ್ರೆಂಡ್ಸ್, ಕ್ಲಾಸ್‌ಮೇಟ್ಸ್, ಸಂಬಂಧಿಕರ ವಾಟ್ಸಾಪ್ ಗ್ರೂಪುಗಳಿರುವುದು ಸಾಮಾನ್ಯ. ಒಬ್ಬರನ್ನೊಬ್ಬರು ಕಂಡರಾಗದವರೂ ಒಂದೇ ಗ್ರೂಪಿನಲ್ಲಿ ಹಣಕಿದ್ದಾರೆ, ಹುಟ್ಟಿದ ಹಬ್ಬಕ್ಕೆ ವಿಶ್ ಮಾಡಿ ಹಳೆಯ ದ್ವೇಷವನ್ನು ಮರೆಯಲು ಪ್ರಯತ್ನಿಸಿದ್ದಾರೆ. ಗುಂಪಿನೊಳಗೆ ಗುಂಪುಗಾರಿಕೆ ಮಾಡುವವರಿದ್ದಾರೆ. ಗ್ರೂಪಿನಲ್ಲಿ ಬಂಡಾಯವೆದ್ದು ಹೊಸ ಗ್ರೂಪುಗಳನ್ನು ಶುರು ಮಾಡುವುದೂ ಇದೆ. ಆ ಗ್ರೂಪಿನಿಂದ, ಈ ಗ್ರೂಪಿಗೆ ಹಾರುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ವಾಟ್ಸಾಪ್ ಗ್ರೂಪುಗಳು ಮ್ಯಾಟ್ರಿಮನಿ ಕೆಲಸವನ್ನೂ ಮಾಡುತ್ತಿವೆ. ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ಮೂಲದ ಮದುವೆ ಮಾಡಿಕೊಳ್ಳಲು ತಯಾರಾಗಿರುವ ಹುಡುಗ, ಹುಡುಗಿಯರ ಗ್ರೂಪುಗಳಿವೆಯಂತೆ!

ಒಂದು ಆಲೋಚನೆ ಬಂತು. ರಾಮಾಯಣ, ಮಹಾಭಾರತದ ಕಾಲದಲ್ಲಿ ವಾಟ್ಸಾಪ್ ಗ್ರೂಪ್ ಮಾಡುವ ಅನುಕೂಲಗಳಿದ್ದಿದ್ದರೆ, ದಶರಥನ ನಾಲ್ಕು ಹೆಂಡತಿಯರ ಒಂದು ಗ್ರೂಪ್ ಇರುತ್ತಿತ್ತು, ಲಂಕೆಗೆ ಸೇತುವೆ ಕಟ್ಟಲು ಹೊರಟ ಕಪಿಗಳ ಗ್ರೂಪ್ ಇರುತ್ತಿತ್ತು. ಕೌರವರ ಗ್ರೂಪ್‌ಗೆ ಭೀಷ್ಮ ಅಡ್ಮಿನ್ ಆಗಿರುತ್ತಿದ್ದರೇನೋ? ದ್ರೌಪದಿಯ ಸೀರೆ ಸೆಳೆಯುವ ಕಾರ್ಯವು ಗ್ರೂಪ್‌ನಲ್ಲಿ ಬಹಿರಂಗವಾಗಿ, ಭೀಷ್ಮ ಅದನ್ನು ತಡೆಯುತ್ತಿದ್ದರೋ ಏನೋ? ಹೀಗೆ ಏನೇನೋ ಸಲ್ಲದ ಆಲೋಚನೆಗಳು ಮುತ್ತಿದ್ದನ್ನು ಕೊಡವಿಕೊಂಡೆ.

ವಾಟ್ಸಾಪ್ ಗ್ರೂಪ್‌ನಲ್ಲಿರುವುದೇನು? ಗ್ರೂಪ್ ಗುಡ್ ಮಾರ್ನಿಂಗ್, ಗುಡ್ ನೈಟ್ ಸಂದೇಶಗಳು... ಎಲ್ಲಿಂದಲೋ ತಳ್ಳಲಾದ ಫೋಟೊ, ವಿಡಿಯೊ, ಸಂದೇಶಗಳು... ಹರಕು ಜೋಕ್ಸ್‌ಗಳು... ಇಂಥವುಗಳನ್ನು ನೋಡುತ್ತಾ, ಓದುತ್ತಾ ಜನರು ಆಲಸಿಗರಾಗುತ್ತಿದ್ದಾರಲ್ಲವೆ? ವಾಟ್ಸಾಪ್‌ನಲ್ಲಿ ಬರುವಂತಹವು ಹೆಚ್ಚಿನವು ಸುಳ್ಳು ಸುದ್ದಿಗಳು ಎನ್ನುವವರ ಸಂಖ್ಯೆಯೂ ಸಾಕಷ್ಟಿದೆ. ಹೇಳಿಕೊಳ್ಳಲಿ ಬಿಡಿ, ಹೂವಿನೊಟ್ಟಿಗೆ ಮುಳ್ಳೂ ಸೇರಿರುತ್ತದೆ ಎನ್ನಬಹುದೇ?

ಪ್ರತಿಕ್ರಿಯಿಸಿ: feedback@sudha.co.in